ಈ ಪ್ರಶ್ನೆ ಪುಸ್ತಿಕೆಯಲ್ಲಿ ಸಾಮಾನ್ಯ ಕನ್ನಡ (ವಿಷಯ ಸಂಕೇತ : **282**) ಹಾಗೂ ಸಾಮಾನ್ಯ ಇಂಗ್ಲೀಷ್ (ವಿಷಯ ಸಂಕೇತ : **283**) ಎಂಬ ಎರಡು ವಿಷಯದ ಪ್ರಶ್ನೆ ಪತ್ರಿಕೆಗಳಿವೆ. ಅಭ್ಯರ್ಥಿಗಳು ಸಾಮಾನ್ಯ ಕನ್ನಡ ಅಥವಾ ಸಾಮಾನ್ಯ ಇಂಗ್ಲೀಷ್ ಇವುಗಳಲ್ಲಿ ಯಾವುದಾದರೂ ಒಂದನ್ನು ಮಾತ್ರ ಆರಿಸಿ ಮತ್ತು ಉತ್ತರಿಸಬೇಕು. ಅಭ್ಯರ್ಥಿಯು ತಾನು ಆಯ್ಕೆ ಮಾಡಿಕೊಂಡು ಉತ್ತರಿಸುವ ವಿಷಯದ ಮುಂದಿನ ವೃತ್ತವನ್ನು ಸ್ಪಷ್ಟವಾಗಿ ಒ.ಎಂ.ಆರ್. ಉತ್ತರ ಹಾಳೆಯಲ್ಲಿರುವ ನಿಗದಿತ ಸ್ಥಳದಲ್ಲಿ ಎನ್‌ಕೋಡ್ ಮಾಡತಕ್ಕದ್ದು.

**ಈ ಪ್ರಶ್ನೆ ಪುಸ್ತಿಕೆಯನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು**

**2018**

178838

FDA

# ಪ್ರಶ್ನೆ ಪುಸ್ತಿಕೆ

# ಸಾಮಾನ್ಯ ಕನ್ನಡ (ಪತ್ರಿಕೆ II)

**ಪ್ರಶ್ನೆ ಪತ್ರಿಕೆ ಶ್ರೇಣಿ**

**B**

**ಸಮಯ : $1\frac{1}{2}$ ಗಂಟೆಗಳು** | **ವಿಷಯ ಸಂಕೇತ : 282** | **ಗರಿಷ್ಠ ಅಂಕಗಳು : 100**

## ಸೂಚನೆಗಳು

1. ಪರೀಕ್ಷೆ ಪ್ರಾರಂಭವಾದ ಕೂಡಲೇ ನಿಮ್ಮ ಪ್ರಶ್ನೆಪತ್ರಿಕೆಯಲ್ಲಿ ಅಮುದ್ರಿತ ಅಥವಾ ಹರಿದಿರುವ ಅಥವಾ ಬಿಟ್ಟು ಹೋಗಿರುವ ಪುಟಗಳು ಅಥವಾ ಪ್ರಶ್ನೆಗಳು ಇತ್ಯಾದಿಗಳು ಕಂಡುಬಂದಲ್ಲಿ ನಿಮ್ಮ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಅದೇ ಶ್ರೇಣಿಯ ಪೂರ್ಣ ಪ್ರಶ್ನೆ ಪತ್ರಿಕೆಯೊಂದಿಗೆ ಬದಲಾಯಿಸಿ ಕೊಳ್ಳತಕ್ಕದ್ದು.
2. **ಅಭ್ಯರ್ಥಿಯು ಪ್ರಶ್ನೆ ಪತ್ರಿಕೆಯ ಶ್ರೇಣಿಯು, ತಮ್ಮ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಅದೇ ಪ್ರಶ್ನೆಪತ್ರಿಕೆಯ ಶ್ರೇಣಿಯಾಗಿರುವುದೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ವ್ಯತ್ಯಾಸಗಳು ಕಂಡುಬಂದಲ್ಲಿ, ಸಂವೀಕ್ಷಕರ ಗಮನಕ್ಕೆ ತರುವುದು ಮತ್ತು ಪ್ರಶ್ನೆಪತ್ರಿಕೆಯ ಶ್ರೇಣಿಯು ತಮಗೆ ಹೊಂದುವ (ಅದೇ) ಪ್ರಶ್ನೆ ಪತ್ರಿಕೆಯಾದ ಮತ್ತು ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಶ್ರೇಣಿಯ ಪ್ರಶ್ನೆ ಪತ್ರಿಕೆಯನ್ನೇ ಪಡೆಯತಕ್ಕದ್ದು.**
3. ಪಕ್ಕದಲ್ಲಿ ಒದಗಿಸಿರುವ ಪ್ರಶ್ನೆಪತ್ರಿಕೆಯ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆ ಪುಸ್ತಿಕೆಯಲ್ಲಿ ಬೇರೆ ಏನನ್ನೂ ಬರೆಯಬಾರದು.

| ನೋಂದಣಿ ಸಂಖ್ಯೆ | | | | | | |
|---|---|---|---|---|---|---|
| 2 | 0 | 0 | 0 | 4 | 8 | 7 |

4. **ಈ ಪ್ರಶ್ನೆ ಪುಸ್ತಿಕೆ 100 ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.** ಪ್ರತಿಯೊಂದು ಪ್ರಶ್ನೆಯು **4** ಪ್ರತಿಕ್ರಿಯೆಗಳನ್ನು (ಉತ್ತರಗಳನ್ನು) ಒಳಗೊಂಡಿರುತ್ತದೆ. ನೀವು ಉತ್ತರ ಹಾಳೆಯಲ್ಲಿ ಗುರುತು ಮಾಡಬೇಕೆನಿಸುವ ಉತ್ತರವನ್ನು ಆಯ್ಕೆ ಮಾಡಿಕೊಳ್ಳಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ ನಿಮಗೆ ಅತ್ಯುತ್ತಮವೆನಿಸುವ ಉತ್ತರಕ್ಕೆ ಗುರುತು ಮಾಡಿ. ಏನೇ ಆದರೂ ಪ್ರತಿ ಪ್ರಶ್ನೆಗೆ ನೀವು ಕೇವಲ ಒಂದು ಉತ್ತರವನ್ನು ಮಾತ್ರ ಆಯ್ಕೆ ಮಾಡಬೇಕು.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಒ.ಎಂ.ಆರ್. ಉತ್ತರ ಹಾಳೆಯ ಮೇಲೆ **ಕೇವಲ ಕಪ್ಪು ಅಥವಾ ನೀಲಿ ಶಾಯಿಯ ಬಾಲ್‌ಪಾಯಿಂಟ್ ಪೆನ್ನಿನಲ್ಲಿ ಮಾತ್ರ ಗುರುತು ಮಾಡಬೇಕು.** ಒ.ಎಂ.ಆರ್. ಉತ್ತರ ಪತ್ರಿಕೆ ಹಾಳೆಯಲ್ಲಿನ ವಿವರವಾದ ಸೂಚನೆಗಳನ್ನು ಗಮನಿಸುವುದು.
6. ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳು. **ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ.** ನೀವು ಗಳಿಸುವ ಒಟ್ಟಾರೆ ಅಂಕಗಳು ನೀವು ಉತ್ತರ ಪತ್ರಿಕೆ ಹಾಳೆಯಲ್ಲಿ ಗುರುತು ಮಾಡುವ ಸರಿಯಾದ ಉತ್ತರಗಳ ಸಂಖ್ಯೆಯನ್ನು ಮಾತ್ರ ಆಧರಿಸಿರುತ್ತದೆ.
7. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆ ಪುಸ್ತಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆ ಪುಸ್ತಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.
8. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಒ.ಎಂ.ಆರ್. ಉತ್ತರ ಪತ್ರಿಕೆ ಹಾಳೆಯಲ್ಲಿ ಇನ್ನಾವುದೇ ಗುರುತು ಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಒ.ಎಂ.ಆರ್. ಉತ್ತರ ಹಾಳೆಯನ್ನು ತಮ್ಮ ವಶಕ್ಕೆ ಪಡೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.

**ಯಾವುದೇ ರೀತಿಯ ಮೊಬೈಲ್ ಫೋನ್, ಕ್ಯಾಲ್ಕ್ಯುಲೇಟರ್ ಮತ್ತು ಇತರೆ ರೀತಿಯ ಎಲೆಕ್ಟ್ರಾನಿಕ್/ಕಮ್ಯೂನಿಕೇಷನ್ ಸಾಧನಗಳು ಇತ್ಯಾದಿಗಳನ್ನು ಪರೀಕ್ಷಾ ಕೇಂದ್ರದ ಆವರಣದೊಳಗೆ ತರುವುದನ್ನು ನಿಷೇಧಿಸಿದೆ.**

***Note :*** *English version of the instructions is printed on the back cover of this booklet.*

www.shikarat.com

***ಸೂಚನೆಗಳು :*** *ಕೆಳಗಿನ ಪದಗಳಿಗೆ (ಪ್ರಶ್ನೆ ಸಂಖ್ಯೆ 1 – 9) ಅವುಗಳ ಮುಂದೆ ಸೂಚಿಸಿದ ಪರ್ಯಾಯ ರೂಪಗಳಲ್ಲಿ ಸಮಾನಾರ್ಥಕವಾದ ಅಥವಾ ಅತಿ ಸಮೀಪದ ಅರ್ಥವುಳ್ಳ ರೂಪವನ್ನು ಗುರ್ತಿಸಿ.*

ಉದಾಹರಣೆ: ಮೀನ್ ಎಂದರೆ

(1) ಹೊಳೆಯುವ

(2) ಮೀಯು

(3) ಮೇಯು

(4) ಆಕಾಶ

ಇಲ್ಲಿ "ಹೊಳೆಯುವ" ಎಂಬುದು "ಮೀನ್"ನ ಅರ್ಥವನ್ನು ಹೇಳುವ ಪದ ಆದುದರಿಂದ (1) ನ್ನು ಗುರುತಿಸಬೇಕು.

**1.** ಸಾಕೂತ

(1) ಸಹಿಸಲಸಾಧ್ಯವಾದ

(2) ಕುತೂಹಲಕರವಾದ

(3) ಸಾಕುಸಾಕಾದ

(4) ಅಭಿಪ್ರಾಯ ಸಹಿತವಾದ

**2.** ಬವರ

(1) ಯುದ್ಧ

(2) ಮಿತ್ರತ್ವ

(3) ಕ್ಷಿಪಣಿ ಧಾಳಿ

(4) ಶತ್ರುತ್ವ

**3.** ಪ್ರಮೋದ

(1) ಸಂತೋಷ

(2) ಆರಾಧನೆ

(3) ಮದ

(4) ಮಂದ

**4.** ಮುಕುರ

(1) ಮುಖ

(2) ಕನ್ನಡಿ

(3) ಕಣ್ಣು

(4) ಮೂಗುತಿ

**5.** ತಂಡುಲ

(1) ಹೊಲ

(2) ಡಿಂಗರ

(3) ಅಕ್ಕಿ

(4) ರಾಗಿ

**6.** ಮೇದಿನಿ

(1) ಮರ

(2) ಬೆಟ್ಟಗುಡ್ಡ

(3) ಭೂಮಿ

(4) ಮೇವು ಇರುವ ತಾಣ

**7.** ಆವು

(1) ಆಡು

(2) ಹಾವು

(3) ಹಸು

(4) ಎತ್ತು



www.shikarat.com

8. ಉತ್ತಾರಣ ಎಂದರೆ

(1) ಉತ್ತರ ಕ್ರಿಯೆ

(2) ಉದ್ಧಾರಣೆ

(3) ಉತ್ತರ ನೀಡುವಿಕೆ

(4) ದಾಟುವಿಕೆ

9. ಜಕಾತಿ ಎಂದರೆ

(1) ಚಪಾತಿ

(2) ದರ

(3) ಸುಂಕ

(4) ಜಗಳ

***ಸೂಚನೆಗಳು :*** *ಕೆಳಗೆ ಕೊಟ್ಟಿರುವ ಪದಗಳಿಗೆ (ಪ್ರಶ್ನೆ ಸಂಖ್ಯೆ 10 – 17) ವಿರುದ್ಧಾರ್ಥಕ ಪದಗಳನ್ನು ಮುಂದೆ ಕೊಟ್ಟಿರುವ ಪರ್ಯಾಯ ರೂಪಗಳಿಂದ ಗುರ್ತಿಸಿ.*

ಉದಾಹರಣೆ : ತೆಂಕಣ

(1) ಮೂಡಣ

(2) ಬಡಗಣ

(3) ಪಡುವಣ

(4) ತೆಗಣ

ಇಲ್ಲಿ "ತೆಂಕಣ" ಪದಕ್ಕೆ ವಿರುದ್ಧಾರ್ಥಕ ರೂಪ "ಬಡಗಣ" ಎಂಬುದು (2) ನ್ನು ಗುರುತಿಸಬಹುದು.

10. ತಿಟ್ಟು

(1) ಮೊಗ್ಗು

(2) ತಗ್ಗು

(3) ನುಗ್ಗು

(4) ಜುಟ್ಟು

11. ತುಮುಲ

(1) ವಿರಳ

(2) ನಿರಾಳ

(3) ಸರಳ

(4) ಕರಾಳ

12. ಚೇತನ

(1) ಅನಿಕೇತನ

(2) ಸಚೇತನ

(3) ನಿಕೇತನ

(4) ಅಚೇತನ

13. ಭೃತ್ಯ

(1) ಪ್ರಜೆ

(2) ಸೇವಕ

(3) ಪ್ರಭು

(4) ಯತಿ



www.shikarat.com

14. ಶಾಮಕ

(1) ಕಡಿಮೆ

(2) ಶಾಬಕ

(3) ಶಾರೀರಕ

(4) ಉಲ್ಬಣಕ

15. ಅವಸರ್ಪಿಣಿ

(1) ಉಪಸರ್ಪಿಣಿ

(2) ಶತಸರ್ಪಿಣಿ

(3) ಉತ್ಸರ್ಪಿಣಿ

(4) ಕುತ್ಸರ್ಪಿಣಿ

16. ಅಭಿಮುಖ

(1) ಸುಮುಖ

(2) ಷಣ್ಮುಖ

(3) ದುರ್ಮುಖ

(4) ವಿಮುಖ

17. ಊರ್ಧ್ವಮುಖ

(1) ಉದ್ದಮುಖ

(2) ಸುಮುಖ

(3) ಅಧೋಮುಖ

(4) ಗುಣಮುಖ

*__ಸೂಚನೆಗಳು :__ ಈ ಕೆಳಗೆ ಕೆಲವು ಕನ್ನಡದ ನುಡಿಗಟ್ಟುಗಳನ್ನು (ಪ್ರಶ್ನೆ ಸಂಖ್ಯೆ 18 – 22) ಅವುಗಳ ಮುಂದೆ ನಾಲ್ಕು ಪರ್ಯಾಯ ರೂಪಗಳನ್ನು ನೀಡಿದೆ. ನುಡಿಗಟ್ಟಿನ ಅರ್ಥವನ್ನು ವಿವರಿಸುವ ರೂಪವನ್ನು ಆಯ್ಕೆಮಾಡಿ ಗುರುತಿಸಿ.*

ಉದಾಹರಣೆ : "ಬೆಣ್ಣೆ ಹಚ್ಚು"

(1) ರೊಟ್ಟಿಗೆ ಬೆಣ್ಣೆ ಹಚ್ಚು

(2) ಮೈಯುಜ್ಜುವುದು

(3) ಹೊಗಳುವುದು

(4) ಸೇವೆ ಮಾಡುವುದು

ಇಲ್ಲಿ "ಹೊಗಳುವುದು" ಸರಿಯಾದ ಅರ್ಥ ಆದುದರಿಂದ (3) ನ್ನು ಗುರುತಿಸಬೇಕು.

18. 'ಗುಡ್ಡಕ್ಕೆ ಕಲ್ಲು ಹೊತ್ತ ಹಾಗೆ ಎಂದರೆ

(1) ಗುಡ್ಡದ ಮೇಲಿನ ಕಲ್ಲು

(2) ಕಲ್ಲಿನಿಂದ ಕೂಡಿದ ಗುಡ್ಡ

(3) ನಿರರ್ಥಕವಾದ ಕೆಲಸ

(4) ಗುಡ್ಡದ ಮೇಲೆ ಕಲ್ಲನ್ನಿಡು

www.shikarat.com

19. 'ಎತ್ತಿದ ಕೈ'

(1) ಕೈಯನ್ನು ಸದಾ ಎತ್ತಿರುವವನು

(2) ಕೈಯನ್ನು ಇಳಿಸದೇ ಇರುವವನು

(3) ಪ್ರವೀಣ

(4) ಕೈ ಇಲ್ಲದವನು

20. 'ತಲೆ ತೊಳೆದು ಕೊಳ್ಳು'

(1) ತಲೆಯನ್ನು ಶುಚಿಗೊಳಿಸು

(2) ತಲೆಯನ್ನು ತೆರೆದು ನಿಲ್ಲುವುದು

(3) ಸಂಬಂಧವನ್ನು ಸಂಪೂರ್ಣ ಕಳೆದುಕೊಳ್ಳುವುದು

(4) ಚಿಂತಾಕ್ರಾಂತನಾಗುವುದು

21. ಕಣ್ಣಿಗೆ ಎಣ್ಣೆ ಬಿಟ್ಟುಕೊಂಡು

(1) ಅತ್ಯಂತ ಎಚ್ಚರದಿಂದ ಕಾಯುವುದು

(2) ಅತ್ಯಂತ ಭಯದಿಂದಿರು

(3) ಕಣ್ಣಿಗೆ ಎಣ್ಣೆ ಹಾಕಿಕೊಳ್ಳುವುದು

(4) ಕಣ್ಣು ತುಂಬಿಕೊಂಡು

22. 'ಭೂಮಿ ತೂಕದ ಮನುಷ್ಯ' ಎಂದರೆ

(1) ತುಂಬ ಭಾರವಾದ ಮನುಷ್ಯ

(2) ತಾಳ್ಮೆ ಗುಣದ ಮನುಷ್ಯ

(3) ಭೂಮಿಗೆ ಭಾರವಾದ ಮನುಷ್ಯ

(4) ಭೂಮಿಯಷ್ಟೆ ತೂಕ ತೂಗುವ ಮನುಷ್ಯ

***ಸೂಚನೆಗಳು :*** *ಕೆಳಗಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ **23 – 27**) ಗೆರೆ ಎಳೆದ ಭಾಗದಲ್ಲಿ ಕೊಡಲಾದ ಇಂಗ್ಲೀಷ್ ರೂಪಕ್ಕೆ ಪರ್ಯಾಯವಾಗಿ ನಾಲ್ಕು ಕನ್ನಡ ರೂಪಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದುದನ್ನು ಗುರುತಿಸಿ.*

ಉದಾಹರಣೆ : ಹೆದ್ದಾರಿಯಲ್ಲಿ ಕಾರೊಂದು **ಆಕ್ಸಿಡೆಂಟ್** ಗೊಳಗಾಯಿತು.

(1) ಪ್ರಮಾದ

(2) ಅಪಘಾತ

(3) ವಿಪತ್ತು

(4) ಅಕಸ್ಮಾತ್

ಇಲ್ಲಿ "ಅಪಘಾತ" ಎಂಬುದು ಸೂಕ್ತ ರೂಪವಾದುದರಿಂದ (2) ನ್ನು ಗುರುತಿಸಬೇಕು.

23. ಒಳ್ಳೆಯ ಸಲಹೆ ಸೂಚನೆಗಳಿಗೆ **ಅಡ್ವರ್ಸ್** ಉತ್ತರ ನೀಡಬಾರದು.

(1) ಕೆಟ್ಟದಾಗಿ

(2) ವ್ಯತಿರಿಕ್ತ

(3) ಸಮಯೋಚಿತ

(4) ನಿರ್ಲಕ್ಷಿತ



www.shikarat.com

24. ಭಾರತವು ಸೆಕ್ಯುಲರ್ ಗಣರಾಜ್ಯವಾಗಿದೆ.

(1) ಮತೀಯ

(2) ಜಾತ್ಯಾತೀತ

(3) ನಿರಂಕುಶ

(4) ಕೋಮುವಾದಿ

25. ಮಗುವಿಗೆ ರಿಂಗ್‌ವರ್ಮ್ ಬಂದುದರಿಂದ ಔಷಧಿ ಕೊಡಿಸಿದರು.

(1) ಕಡ್ಡಿಹುಣ್ಣು

(2) ಹುಳುಕಡ್ಡಿ

(3) ನಾಯಿಕೆಮ್ಮು

(4) ಗಂಟಲು ಮಾರಿ

26. ಬಹುತೇಕ ದೇಶಗಳ ಯುವಜನ ಇಂದು 'ಅಥಾರಿಟೇರಿಯನಿಸಂ' ನ್ನು ಬಯಸುತ್ತಾರೆ. ಈ ವಾಕ್ಯದಲ್ಲಿರುವ **'ಅಥಾರಿಟೇರಿಯನಿಸಂ'** ಎಂಬುದು

(1) ಸರ್ವಾಧಿಕಾರವಾದ

(2) ನಿರ್ಬಂಧಿತ ಅಧಿಕಾರವಾದ

(3) ಸಮತಾವಾದ

(4) ಮತೀಯ

27. ಸ್ವಾತಂತ್ರ್ಯ ಇರುವ ದೇಶದಲ್ಲಿ ಫ್ರಟರ್ನಿಟಿಗೆ ಹೆಚ್ಚು ಮಹತ್ವವಿರಬೇಕು.

(1) ಸಹೋದರತ್ವ

(2) ಸಮಾನತೆ

(3) ಸಹಬಾಳ್ವೆ

(4) ಸಹಕಾರ ಭಾವನೆ

*ಸೂಚನೆಗಳು: ಈ ಕೆಳಗೆ ಕೊಟ್ಟ ಶಬ್ದಗಳಲ್ಲಿ (ಪ್ರಶ್ನೆ ಸಂಖ್ಯೆ 28 - 32) ಒಂದು ಪದ ಉಳಿದವುಗಳ ಗುಂಪಿಗೆ ಸೇರುವುದಿಲ್ಲ. ಅಂತಹ ಪದ ಗುರುತಿಸಿ.*

*ಉದಾಹರಣೆ :*

(1) ಹುಡುಗಿ

(2) ನವಿಲು

(3) ಗಿಳಿ

(4) ಕಿತ್ತಳೆ

ಇಲ್ಲಿ "ಕಿತ್ತಳೆ" ಇತರ ಪದಗಳ ಜಾತಿಗೆ ಸೇರುವುದಿಲ್ಲ ಆದುದರಿಂದ (4) ನ್ನು ಗುರುತಿಸಬೇಕು.

28. (1) ಅಧಿಕರಣ

(2) ಕರ್ಮ

(3) ಸಂಪ್ರದಾನ

(4) ಸಂಬಂಧ

29. (1) ವಯಸ್ಸು

(2) ಹರಯ

(3) ಪ್ರಾಯ

(4) ವಾರಿಗೆ



www.shikarat.com

30. (1) ಸಂಕ್ರಮಣ

(2) ಪ್ರಕ್ರಿಯೆ

(3) ಪರಿವರ್ತನೆ

(4) ಬದಲಾವಣೆ

31. (1) ಮತ್ತು

(2) ಅಥವಾ

(3) ಆದ್ದರಿಂದ

(4) ಅದುವೇ

32. (1) ಓಲೆಗರಿ

(2) ತಾಳೆಗರಿ

(3) ಭೂರ್ಜಪತ್ರ

(4) ಪದ್ಮಪತ್ರ

***ಸೂಚನೆಗಳು:*** *ಕೆಳಗಿನ ವಾಕ್ಯಗಳಲ್ಲಿ ಗೆರೆ ಹಾಕಿ ಸೂಚಿಸಿದ ಭಾಗ ತಪ್ಪಾಗಿದ್ದರೆ ಮುಂದೆ ಕೊಡಲಾದ ಮೂರು ಪರ್ಯಾಯ ರೂಪಗಳಲ್ಲಿ ಸರಿಯಾದ ರೂಪವನ್ನು ಗುರುತಿಸಿ. ತಪ್ಪಿಲ್ಲದಿದ್ದರೆ "ತಪ್ಪಿಲ್ಲ" ಎಂಬ (4) ನ್ನು ಗುರುತಿಸಿ (ಪ್ರಶ್ನೆ ಸಂಖ್ಯೆ **33 – 38**).*

ಉದಾಹರಣೆ : ಲೋಕಾಯುಕ್ತ ಲಂಚ **ಹಗುರಣಕ್ಕೆ** ಸಂಬಂಧಿಸಿ ಎಂಟು ಜನರ ಬಂಧನ

(1) ಹಾಗರಣ

(2) ಹಗರಣ

(3) ಹಗರನ

(4) ತಪ್ಪಿಲ್ಲ

ಇಲ್ಲಿ ಗೆರೆ ಎಳೆದ "ಹಗುರಣ" ತಪ್ಪಾಗಿದ್ದು ಅದರ ಸರಿಯಾದ ರೂಪವು "ಹಗರಣ" ಎಂದಾಗಿದೆ ಅದರಿಂದ (2) ನ್ನು ಗುರುತಿಸಬೇಕು.

33. ಮುಖ್ಯ ಮಂತ್ರಿಗಳು ಅಂಬೇಡ್ಕರ್ ಭವನ ನಿರ್ಮಾಣದ **ಶಂಕುಸ್ತಾಪನೆ** ನೆರವೇರಿಸಿದರು.

(1) ಶಂಖುಸ್ಥಾಪನೆ

(2) ಶಂಕು ಸ್ಥಾಪನೆ

(3) ಶಂಕು ಸ್ತಾಪನೆ

(4) ತಪ್ಪಿಲ್ಲ

www.shikarat.com

34. ಆಹ್ವಾನಿತ ಗಣ್ಯರ **ಓತಪ್ರೋಥ** ನುಡಿಗಳಿಗೆ ಸಭಿಕರು ತಲೆದೂಗಿದರು.

(1) ಓತಪ್ರೋತ

(2) ಓತಪ್ರೊತ

(3) ಓತಪ್ರೂತ

(4) ತಪ್ಪಿಲ್ಲ

35. ಭಾರತದ ಆರ್ಥಿಕ ಚಟುವಟಿಕೆಯಲ್ಲಿ ರೈತ ಸಮುದಾಯವೇ **ಆಧಾರಸ್ಥಂಭ**.

(1) ಆದಾರಸ್ತಂಭ

(2) ಆಧಾರಸ್ತಂಭ

(3) ಅಧಾರ ಸ್ಥಂಬ

(4) ತಪ್ಪಿಲ್ಲ

36. ಜನರು ದೇವರನ್ನು **ಶೋಡಷೋಪಚಾರ**ಗಳಿಂದ ಪೂಜಿಸುತ್ತಾರೆ.

(1) ಸೋಡಷೋಪಚಾರ

(2) ಸೋಡಶೋಪಚಾರ

(3) ಷೋಡಶೋಪಚಾರ

(4) ತಪ್ಪಿಲ್ಲ

37. ಶಿಕ್ಷಕರು **ರಾಷ್ಟ್ರೀಕರಣ** ಕುರಿತು ಪಾಠ ಹೇಳಿದರು.

(1) ರಾಷ್ಟ್ರೀಕರಣ

(2) ರಷ್ಟ್ರೀಕರಣ

(3) ರಾಷ್ಟ್ರೀಕಾರಣ

(4) ತಪ್ಪಿಲ್ಲ

38. ದೆಹಲಿಯಲ್ಲಿ ಗಣರಾಜ್ಯೋತ್ಸವದ ಅಂಗವಾಗಿ **ಸ್ತಬ್ಧಚಿತ್ರ** ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

(1) ಸ್ತಬ್ಧಚಿತ್ರ

(2) ಸ್ಥಬ್ಧಚಿತ್ರ

(3) ಸ್ಥಬ್ದಚಿತ್ರ

(4) ತಪ್ಪಿಲ್ಲ

***ಸೂಚನೆಗಳು:*** *ಖಾಲಿ ಬಿಟ್ಟಿರುವ ಜಾಗಕ್ಕೆ ಸರಿಯಾದ ಉತ್ತರವನ್ನು ಗುರುತಿಸಿ. (ಪ್ರಶ್ನೆ ಸಂಖ್ಯೆ 39 – 65)*

ಉದಾಹರಣೆ : ನಡೆಯುತ್ತಿದೆ ಎಂಬುದು _____ ದ ಪದ.

(1) ಭೂತಕಾಲ

(2) ವರ್ತಮಾನ ಕಾಲ

(3) ಭವಿಷ್ಯತ್ ಕಾಲ

(4) ಹಿಂದಿನ ಕಾಲ

ಇಲ್ಲಿ "ವರ್ತಮಾನ ಕಾಲ" ಎಂಬುದು ಸರಿಯಾದ ಉತ್ತರ ಆದುದರಿಂದ (2) ನ್ನು ಗುರುತಿಸಬೇಕು.



www.shikarat.com

39. ‘ಅರರೇ ಗಿಣಿ ರಾಮ ! ವಾಕ್ಯದ ‘ಅರರೇ’ ಎಂಬುದು ________ .

(1) ಅನುಕರಣಾವ್ಯಯ

(2) ಭಾವಸೂಚಕಾವ್ಯಯ

(3) ಸಂಬಂಧ ಸೂಚಕಾವ್ಯಯ

(4) ಸಾಮಾನ್ಯ ಅವ್ಯಯ

40. ‘ಸಲುವಳಿ’ ಎಂಬ ಪದ ______ ಗೆ ಸಂಬಂಧಿಸಿದೆ.

(1) ತದ್ಧಿತ ವಿಶೇಷಣ

(2) ತದ್ಧಿತ ಭಾವನಾಮ

(3) ತದ್ಧಿತ ನಾಮ

(4) ತದ್ಧಿತಾವ್ಯಯ

41. ಕೆಳಗಿನವುಗಳಲ್ಲಿ ಕಂಠ್ಯ ಧ್ವನಿಯಾಗಿರುವುದು ________ .

(1) ಕ್, ಗ್

(2) ಟ್, ಡ್

(3) ತ್, ದ್

(4) ಪ್, ಬ್

42. ‘ಬಾವಿ’ ಪದದ ತತ್ಸಮ ರೂಪ ________ .

(1) ವಾಪಿ

(2) ಬಾಪಿ

(3) ವಾಬಿ

(4) ವಾಪು

43. ಊರು ಉಪಕಾರ ಅರಿಯದು, ಹೆಣ ಶೃಂಗಾರ ಅರಿಯದು ಎಂಬುದು ________ ಅಲಂಕಾರಕ್ಕೆ ಉದಾಹರಣೆ.

(1) ಅರ್ಥಾಂತರ ನ್ಯಾಸಾಲಂಕಾರ

(2) ಶ್ಲೇಷಾಲಂಕಾರ

(3) ದೃಷ್ಟಾಂತಾಲಂಕಾರ

(4) ರೂಪಕಾಲಂಕಾರ

44. ಹೊಸದು + ಕನ್ನಡ = ಹೊಸಗನ್ನಡ, ಇದು ______ ಸಮಾಸ.

(1) ಗಮಕ ಸಮಾಸ

(2) ಕ್ರಿಯಾ ಸಮಾಸ

(3) ದ್ವಿಗು ಸಮಾಸ

(4) ಕರ್ಮಧಾರಯ ಸಮಾಸ

www.shikarat.com

45. 'ಕಿಕ್ಕಿರಿದ ಸಭೆ' ಎಂಬುದು ________ ವಿಶೇಷಣ.

(1) ಪರಿಮಾಣ ವಾಚಕ ವಿಶೇಷಣ

(2) ಸಂಖ್ಯಾ ವಾಚಕ ವಿಶೇಷಣ

(3) ಗುಣ ವಾಚಕ ವಿಶೇಷಣ

(4) ನಿಶ್ಚಿತ ಸಂಖ್ಯಾ ವಾಚಕ ವಿಶೇಷಣ

46. ದ್ವಿ + ಪದಿ = ದ್ವಿಪದಿ ಎಂಬುದು ______.

(1) ಅಂಶಿ ಸಮಾಸ

(2) ಕರ್ಮಧಾರೆಯ

(3) ಗಮಕ ಸಮಾಸ

(4) ದ್ವಿಗು ಸಮಾಸ

47. 'ಆನೆ' ಪದದಲ್ಲಿ ಇರುವ ಸ್ವರಗಳು ________.

(1) ಒಂದು

(2) ಎರಡು

(3) ನಾಲ್ಕು

(4) ಮೂರು

48. 'ಹಾಲು ಕಂಡಲ್ಲಿ ಬೆಕ್ಕು ಕೂಳು ಕಂಡಲ್ಲಿ ನಾಯಿ' ಇದೊಂದು ________.

(1) ಪಡೆನುಡಿ

(2) ಒರಟು ನುಡಿ

(3) ಒಗಟು ನುಡಿ

(4) ಗಾದೆ ಮಾತು

49. ಗುಂಪಿನಲ್ಲಿರುವ ಬಿಡಿಸಲಾರದ ಪದ ______.

(1) ಅಕ್ಷರ

(2) ಅಸುರ

(3) ಅಮರ

(4) ಅರಸ

50. 'ತುದಿನಾಲಗೆ' ಈ ಸಮಾಸಪದದ ವಿಗ್ರಹವಾಕ್ಯ ________.

(1) ತುದಿ + ನಾಲಗೆ

(2) ನಾಲಗೆಯ + ತುದಿ

(3) ತುದಿಯ + ನಾಲಗೆ

(4) ತುದಿಯದಾದ + ನಾಲಗೆ



www.shikarat.com

51. 'ಶುನಕ' ಪದದ ತದ್ಭವ ರೂಪ ______ .

(1) ಸೊಣಗ

(2) ಶೌನಕ

(3) ಶುನಿ

(4) ಯಾವುದೂ ಅಲ್ಲ

52. 'ನಿಲ್ಲು, ಮಿಸುಕಾಡಬೇಡ' ಇಲ್ಲಿನ ಕ್ರಿಯಾಪದದ ಸ್ವರೂಪ ______ .

(1) ವಿಧ್ಯರ್ಥಕ

(2) ನಿಷೇಧಾರ್ಥಕ

(3) ಸಾಮಾನ್ಯ ರೂಪ

(4) ಸಂಬಂಧಾರ್ಥ

53. 'ಬೆಳ್ಳಿ ಮೋಡವೆ ಎಲ್ಲಿ ಓಡುವೆ ನನ್ನ ಬಳಿಗೇ ನಲಿದು ಬಾ' ಇದರ ಲಯ ______ .

(1) ಮಂದಾನಿಲ

(2) ಭಾಮಿನಿ

(3) ಲಲಿತ

(4) ವಾರ್ಧಕ

54. ತೃತೀಯಾ ವಿಭಕ್ತಿಯು ______ ಕಾರಕ.

(1) ಕರ್ಮ

(2) ಕರಣ

(3) ಸಂಪ್ರದಾನ

(4) ಅಪಾದಾನ

55. 'ರತ್ನಾಕರ' ಪದದ ಸಮಾನಾರ್ಥಕಗಳು ______ .

(1) ತಟಾಕ, ಸರೋವರ

(2) ಸಾಗರ, ಸಮುದ್ರ

(3) ನದಿ, ತೊರೆ

(4) ಸೂರ್ಯ, ಚಂದ್ರ

56. 'ತರಕ್ಷು' ಪದದ ಸಮಾನಾರ್ಥಕ ______ .

(1) ಹುಲಿ

(2) ಜಿಂಕೆ

(3) ಚಿರತೆ

(4) ಮೇಕೆ

57. 'ಮಂಗಳ ಮುಖಿ' ಎಂಬುದರ ಗುಣವಾಚಕ ______ .

(1) ಶುಕ್ರ

(2) ಮಂಗಳ

(3) ಅಂಗಳ

(4) ಲಿಂಗ

58. ದಡ್ಡಕ್ಕರ ಎಂದರೆ ಅದು ______ ಆಗಿರುತ್ತದೆ.

(1) ದಪ್ಪ ಅಕ್ಷರ

(2) ಒತ್ತಕ್ಷರ

(3) ಮಹಾಪ್ರಾಣ

(4) ದೀರ್ಘಾಕ್ಷರ

www.shikarat.com

59. 'ಮಾನವ ಜನ್ಮ ದೊಡ್ಡದು ಇದ ಹಾನಿ ಮಾಡಲಿ ಬೇಡಿ ಹುಚ್ಚಪ್ಪಗಳಿರಾ'. ಹೀಗೆಂದವರು ______ .

(1) ಪುರಂದರ ದಾಸ

(2) ಕನಕದಾಸ

(3) ಜಗನ್ನಾಥದಾಸ

(4) ವಿಜಯದಾಸ

60. ______ ಅಕ್ಕರ ಪಲ್ಲಟಕ್ಕೆ ಉದಾಹರಣೆ ಅಲ್ಲ.

(1) ಅಸಗ

(2) ಕಾದಗ

(3) ಅರಲ್

(4) ಮರಲ್

61. ______ ಅರ್ಥ-ಸಂಕೋಚಗೊಂಡಿರುವುದಕ್ಕೆ ಉದಾಹರಣೆ ಅಲ್ಲ.

(1) ಅಣಕ

(2) ಕಬ್ಬಿಣ

(3) ಎಣ್ಣೆ

(4) ಮೀನ್

62. 'ಶಿಖರ' ಎಂಬುದು ______ .

(1) ನಾಮಪದ

(2) ಕ್ರಿಯಾಪದ

(3) ವಿಶೇಷಣ

(4) ಧಾತು

63. ಕರ್ನಾಟಕದಲ್ಲಿ ದೊರೆತ ಅಶೋಕನ 'ಮಸ್ಕಿ' ಶಾಸನವನ್ನು______ ಲಿಪಿಯಲ್ಲಿ ಬರೆಯಲಾಗಿದೆ.

(1) ಸಂಸ್ಕೃತ

(2) ತೆಲುಗು

(3) ಕನ್ನಡ

(4) ಬ್ರಾಹ್ಮೀ

64. ತಂದೆಗೂ ಗುರುವಿಗೂ | ಒಂದು ಅಂತರವುಂಟು |
ತಂದೆ ತೋರುವನು ಸದ್ಗುರುವ, ಗುರುರಾಯ |
ಬಂಧನವ ಕಳೆವ, ಸರ್ವಜ್ಞ ||

ಈ ಪದ್ಯವು ______ ಗೆ ಉತ್ತಮ ಉದಾಹರಣೆಯಾಗಿದೆ.

(1) ಕಂದ ಪದ್ಯ

(2) ಭಾಮಿನೀ ಷಟ್ಪದಿ

(3) ಸಾಂಗತ್ಯ ಪದ್ಯ

(4) ತ್ರಿಪದಿ ಪದ್ಯ

65. 'ಹಣ್ಣುಗಳಲ್ಲಿ ಮಾವಿನ ಹಣ್ಣೇ ಶ್ರೇಷ್ಠ - ಇಲ್ಲಿ ಹಣ್ಣುಗಳಲ್ಲಿ ಎಂಬುದು ______ ವಿಭಕ್ತಿ.

(1) ಸಂಬೋಧನಾ ವಿಭಕ್ತಿ

(2) ಪ್ರಥಮಾ ವಿಭಕ್ತಿ

(3) ಚತುರ್ಥಿ ವಿಭಕ್ತಿ

(4) ಸಪ್ತಮೀ ವಿಭಕ್ತಿ

www.shikarat.com

**ಸೂಚನೆಗಳು :** *ಕೆಳಗಿನ ಪ್ರಶ್ನೆಗಳಲ್ಲಿ (ಪ್ರಶ್ನೆ ಸಂಖ್ಯೆ 66 – 69) ಕನ್ನಡ ಮೂಲದ್ದು ಅಲ್ಲದ (ಅನ್ಯಭಾಷೆಯಿಂದ ಸ್ವೀಕೃತವಾದ) ಶಬ್ದವನ್ನು ಗುರುತಿಸಿ.*

ಉದಾಹರಣೆ :

(1) ದಾರಿ

(2) ಹಾದಿ

(3) ರಸ್ತೆ

(4) ಕಾಡು

ಈ ನಾಲ್ಕು ಪದಗಳಲ್ಲಿ "ರಸ್ತೆ" ಮಾತ್ರ ಅನ್ಯಭಾಷೆಯಿಂದ ಸ್ವೀಕೃತವಾದ ಪದವಾಗಿದೆ ಅದುದರಿಂದ ಇಲ್ಲಿ (3) ನ್ನು ಗುರುತಿಸಬೇಕು.

**66.** (1) ದೀವಿಗೆ

(2) ಮಲ್ಲಿಗೆ

(3) ಬಸದಿ

(4) ಪ್ರಣತಿ

**67.** (1) ಜಮೀನು

(2) ಕೃಷಿ

(3) ಬೇಸಾಯ

(4) ಆರಂಬ

**68.** (1) ಕೆನ್ನೀರು

(2) ಬೆನ್ನೀರು

(3) ಬೆಚ್ಚಗೆ

(4) ರೈತ

**69.** (1) ಸಾರು

(2) ಹುಳಿ

(3) ಚಪಾತಿ

(4) ಹುಲ್ಲು

**ಸೂಚನೆಗಳು:** *ಕೆಳಗಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ 70 – 72) ದೋಷವಿದ್ದರೆ ಅದನ್ನು ಸರಿಪಡಿಸಲು ಮುಂದೆ ಕೊಟ್ಟಿರುವ ಪರ್ಯಾಯ ರೂಪಗಳಲ್ಲಿ ಸೂಕ್ತವಾದುದನ್ನು ಗುರ್ತಿಸಿ. ದೋಷವಿಲ್ಲದಿದ್ದರೆ ಸುಧಾರಣೆ ಬೇಕಿಲ್ಲ, ಆಗ (4) ನ್ನು ಗುರುತಿಸಿ.*

ಉದಾಹರಣೆ : ಮಕ್ಕಳು ಸಂಗೀತವನ್ನು ಸುಶ್ರಾವ್ಯವಾಗಿ **ಆಡಿದರು**.

(1) ಹಾಡಿದರು

(2) ಆಲಿಸಿದರು

(3) ಮಾಡಿಸಿದರು

(4) ಆಲಿಸಿದರು

ಇಲ್ಲಿ "ಆಡಿದರು" ಎಂಬುದು ದೋಷವಾಗಿದ್ದು "ಹಾಡಿದರು" ಎಂದಿರಬೇಕು ಅದುದರಿಂದ (1) ನ್ನು ಗುರುತಿಸಬೇಕು.



www.shikarat.com

70. ರಾಮನಿಗೂ ಮತ್ತು ವಾಲಿಗೂ ಮನಸ್ಥಾಪವಿತ್ತು.

(1) ಮನಸ್ತ್ಯಾಪ

(2) ಮನಸ್ತ್ಯಾಪ

(3) ಮನಸ್ತಾಪ

(4) ಸುಧಾರಣೆ ಬೇಕಿಲ್ಲ

71. ಲೋಕಾಯುಕ್ತ ದಳದವರು ತಪ್ಪಿತಸ್ಥರನ್ನು **ಕೂಲಂಕಶವಾಗಿ** ವಿಚಾರಿಸಿದರು.

(1) ಕೂಲಂಕುಷವಾಗಿ

(2) ಕೂಲಂಕಷವಾಗಿ

(3) ಕುಲಂಕಶವಾಗಿ

(4) ಸುಧಾರಣೆ ಬೇಕಿಲ್ಲ

72. ಪ್ರಾಚೀನ ಕಾಲದಲ್ಲಿ ಕರ್ನಾಟಕ ರಾಜ್ಯವನ್ನು ಅನೇಕ **ಚಕ್ರಾಧಿಪತ್ಯಗಳು** ಆಳಿಕೊಂಡು ಬಂದಿದ್ದವು.

(1) ಚಕ್ರಧಿಪತ್ಯಗಳು

(2) ಛಕ್ರಾದಿಪತ್ಯಗಳು

(3) ಚಕ್ರಾದಿಪತ್ಯಗಳು

(4) ಸುಧಾರಣೆ ಬೇಕಿಲ್ಲ

**ಸೂಚನೆಗಳು:** ಕೆಳಗಿನವುಗಳಲ್ಲಿ (ಪ್ರಶ್ನೆ ಸಂಖ್ಯೆ 73 – 77) ಗೆರೆಹಾಕಿದ ಭಾಗಗಳು ತಪ್ಪಾಗಿವೆ. ಅವುಗಳ ಮುಂದೆ ಕೊಟ್ಟ ನಾಲ್ಕು ಪರ್ಯಾಯ ರೂಪಗಳಿಂದ ಸರಿಯಾದ ಉತ್ತರವನ್ನು ಗುರುತಿಸಿ.

ಉದಾಹರಣೆ : ಕುವೆಂಪು **ಚೋಮನದುಡಿ** ಎಂಬ ಕಾದಂಬರಿಯನ್ನು ರಚಿಸಿದ್ದಾರೆ.

(1) ಬೆಟ್ಟದ ಜೀವ

(2) ಕಾನೂರ ಹೆಗ್ಗಡತಿ

(3) ಚಿಕ್ಕವೀರ ರಾಜೇಂದ್ರ

(4) ದುರ್ಗಾಸ್ತಮಾನ

ಇಲ್ಲಿ "ಕಾನೂರ ಹೆಗ್ಗಡತಿ" ಸರಿಯಾದ ಉತ್ತರ ಆದುದರಿಂದ (2) ನ್ನು ಗುರುತಿಸಬೇಕು.

73. 'ಯಮಳ ಪ್ರಶ್ನೆ' ಇದು **ಜಿ.ಎಸ್. ಶಿವರುದ್ರಪ್ಪನವರ** ಕೃತಿ.

(1) ಪಿ. ಲಂಕೇಶ್‌ರ

(2) ಶಿವರಾಮ ಕಾರಂತರ

(3) ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ

(4) ಎಂ.ಗೋವಿಂದ ಪೈರ

www.shikarat.com

74. 'ಮಾತೆಂಬುದು ಜ್ಯೋತಿರ್ಲಿಂಗ' ಎಂದು ನುಡಿದವರು ದೇವರ ದಾಸಿಮಯ್ಯ.

(1) ಬಸವಣ್ಣ

(2) ಸಿದ್ಧರಾಮ

(3) ಅಲ್ಲಮಪ್ರಭುದೇವ

(4) ಅಂಬಿಗರ ಚೌಡಯ್ಯ

75. ತ್ರಿಷಷ್ಠಿ ಲಕ್ಷಣ ಮಹಾಪುರಾಣದ ಇನ್ನೊಂದು ಹೆಸರೆಂದರೆ ಆದಿ ಪುರಾಣ.

(1) ತಿಲಕಾಷ್ಠ ಮಹಿಷ ಬಂಧನ

(2) ಮಹಾ ಪುರಾಣ

(3) ಚಾವುಂಡರಾಯ ಪುರಾಣ

(4) ಉತ್ತರ ಪುರಾಣ

76. ಧಾರವಾಡವು ವಿದ್ಯಾನಗರಿ ಎಂದು ಪ್ರಸಿದ್ಧವಾಗಿದೆ.

(1) ಧಾರಾ ನಗರಿ

(2) ಮಂಜಿನ ನಗರಿ

(3) ಕೆರೆಗಳ ನಗರಿ

(4) ಕ್ರೀಡಾ ನಗರಿ

77. 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಕುವೆಂಪುರವರ ಆತ್ಮ ಕಥೆ

(1) ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರ

(2) ಶಿವರಾಮ ಕಾರಂತರ

(3) ದ.ರಾ. ಬೇಂದ್ರೆಯವರ

(4) ಕೆ.ವಿ. ತಿರುಮಲೇಶ್‌ರ

*ಸೂಚನೆಗಳು: ಮುಂದಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ 78 – 82) ಪದಗಳು ಕ್ರಮಬದ್ಧವಾಗಿಲ್ಲ. ಅವು ಅರ್ಥಪೂರ್ಣವಾಗುವಂತೆ ಗೆರೆಹಾಕಿ ಸೂಚಿಸಿದ ಭಾಗಗಳನ್ನು ಪುನಃ ಜೋಡಿಸಿ. ಅವುಗಳ ಅನುಕ್ರಮವನ್ನು ಗುರುತಿಸಿ.*

ಉದಾಹರಣೆ :

ವಿದ್ಯಾರ್ಥಿಗಳು (P) ಜಾಸ್ತಿಯಾಗಿದೆ (Q)

ಆಕರ್ಷಿತರಾಗುತ್ತಿರುವುದು (R)

ದುರಭ್ಯಾಸಗಳ ಕಡೆಗೆ (S)

(1) P S R Q

(2) Q R S P

(3) S Q R P

(4) Q S R P

ಇಲ್ಲಿ P S R Q ಎಂಬುದು ಸರಿಯಾದ ಜೋಡಣೆಯ ಕ್ರಮ ಆದುದರಿಂದ ಇಲ್ಲಿ (1) ನ್ನು ಗುರುತಿಸಬೇಕು.



www.shikarat.com

78. ಬೋಸ್‌ರನ್ನು ಭೌತಶಾಸ್ತ್ರ ವಿಭಾಗವನ್ನು

P

ಪ್ರಾರಂಭವಾದಾಗ ಅದರ ಕುಲಪತಿಗಳಾಗಿದ್ದ ಡಾ. ಹಟೋರ್ಗ್

Q

1921 ರಲ್ಲಿ ಢಾಕಾ ವಿವಿ

R

ಸೇರುವಂತೆ ಆಮಂತ್ರಿಸಿದರು

S

(1) Q R P S

(2) R Q S P

(3) R P Q S

(4) R Q P S

79. ಅಪಾರ ಸಂಪತ್ತನ್ನು ತೋರುವ ಮಾನವೀಯತೆ

P Q

ಅವರನ್ನು ಬೇರೆಯವರಿಗಿಂತ ಭಿನ್ನವಾಗಿಸುತ್ತದೆ,

R

ಲೋಕ ಕಲ್ಯಾಣಕ್ಕಾಗಿ ವಿನಿಯೋಗಿಸುವಲ್ಲಿ,

S

(1) P Q S R

(2) P R S Q

(3) P Q R S

(4) P S Q R

80. ಸಾಮಾಜಿಕ ಮಾಧ್ಯಮಗಳು

P

ಅಧ್ಯಯನದಲ್ಲಿ ಹೆಚ್ಚಿನ ಪ್ರಗತಿ ಕಂಡು ಬಂದಿಲ್ಲ

Q

ಯುವ ಜನತೆಯನ್ನು

R

ಅತಿಯಾಗಿ ಆಕರ್ಷಿಸಿರುವ ಕಾರಣ

S

(1) P R S Q

(2) R S P Q

(3) R P S Q

(4) S R P Q

81. ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ

P

ಸಂವರ್ಧನೆಗಾಗಿ ಶ್ರಮಿಸುತ್ತಿರುವ

Q

ಸಂಸ್ಕೃತಿಗಳ ಸಂರಕ್ಷಣೆ ಮತ್ತು

R

ಕನ್ನಡಸಾಹಿತ್ಯ ಪರಿಷತ್ತು ನಾಡುನುಡಿ

S

(1) P Q R S

(2) Q R S P

(3) R S P Q

(4) S R Q P

www.shikarat.com

82. ಕನಕದಾಸರ ಅದ್ಭುತವಾದ ಪ್ರತಿಭಾ

P

ರಾಮಧಾನ್ಯ ಚರಿತೆಯು

Q

ಮುನ್ನಡೆದುಕೊಂಡು ಹೋಗುತ್ತದೆ,

R

ಶಕ್ತಿಯಿಂದ ಪಾಂಡಿತ್ಯ ಪೂರ್ಣತೆಯಿಂದ

S

(1) Q S P R

(2) Q P S R

(3) P Q S R

(4) Q S R P

83. ಕರ್ಮಧಾರಯ ಸಮಾಸದ ಭೇದವೆಂದು ಕೇಶಿರಾಜ ಹೇಳಿರುವ ಸಮಾಸ ಯಾವುದು ?

(1) ಅಂಶಿ

(2) ಬಹುವ್ರೀಹಿ

(3) ದ್ವಿಗು

(4) ಗಮಕ

84. ಪಂಪ ಪ್ರಶಸ್ತಿ ಪಡೆದ ಮೊದಲ ಕನ್ನಡ ಕವಿ ಯಾರು ?

(1) ಚೆನ್ನವೀರ ಕಣವಿ

(2) ಕೆ. ಶಿವರಾಮ ಕಾರಂತ

(3) ಕುವೆಂಪು

(4) ಎಸ್.ಎಸ್. ಭೂಸನೂರಮಠ್

85. ಕೃದಂತಗಳಲ್ಲಿ ಎಷ್ಟು ವಿಧಗಳಿವೆ ?

(1) ಎರಡು

(2) ಮೂರು

(3) ನಾಲ್ಕು

(4) ಐದು

86. ಕನ್ನಡದ ವರ್ಣಮಾಲೆಯಲ್ಲಿರುವ ಸಂಧ್ಯಕ್ಷರಗಳು ಯಾವುವು ?

(1) ಋ ೠ

(2) ಐ ಔ

(3) ಅಂ ಅಃ

(4) ಕ್ಷ ಳ

***ಸೂಚನೆಗಳು :*** *ಕೆಳಗಿನ ವಾಕ್ಯಗಳಲ್ಲಿ (ಪ್ರಶ್ನೆ ಸಂಖ್ಯೆ 87 – 92) (1) (2) (3) ಎಂಬ ಗೆರೆ ಎಳೆದ ಭಾಗಗಳಿವೆ. ಈ ಯಾವುದೇ ಭಾಗದಲ್ಲಿ ವ್ಯಾಕರಣ, ಕಾಗುಣಿತ ಅಥವಾ ಚಿಹ್ನೆಗೆ ಸಂಬಂಧಿಸಿದ ದೋಷವಿದ್ದರೆ ಆ ಭಾಗವನ್ನು ಗುರ್ತಿಸಿ. ದೋಷವಿಲ್ಲದಿದ್ದರೆ "ತಪ್ಪಿಲ್ಲ" ಎಂಬ ನಾಲ್ಕನೇ (4) ಭಾಗವನ್ನು ಗುರುತಿಸಿ.*

ಉದಾಹರಣೆ : ವಿದ್ಯಾರ್ಥಿಗಳು (1) ಶಾಲೆಗೆ (2) ಮುಗಿಸಿಕೊಂಡು ಬಂದರು. (3) ತಪ್ಪಿಲ್ಲ (4)

ಇಲ್ಲಿ ಭಾಗ (2) ರಲ್ಲಿ "ಶಾಲೆಯನ್ನು" ಎಂದಿರ ಬೇಕಾಗಿತ್ತು ಈ ಭಾಗದಲ್ಲಿ ದೋಷವಿರುವುದರಿಂದ ಇಲ್ಲಿ (2) ನ್ನು ಗುರುತಿಸಬೇಕು.

www.shikarat.com

87. ಸ್ವಾತಂತ್ರ್ಯ ಪೂರ್ವದಲ್ಲಿ ಕರ್ನಾಟಕವು (1) ಅಲವು ಭಾಗಗಳಲ್ಲಿ (2) ಹರಿದು ಹಂಚಿ ಹೋಗಿದ್ದಿತು. (3) ತಪ್ಪಿಲ್ಲ (4)

88. ವಿದ್ಯಾರ್ಥಿಗಳು (1) ಗುರುಗಳಿಗೆ (2) ವಿದೇಯರಾಗಿದ್ದಾರೆ. (3) ತಪ್ಪಿಲ್ಲ (4)

89. ಹೆತ್ತ ತಾಯಿ (1) ಹೊತ್ತ ಭೂಮಿ (2) ಸ್ವರ್ಗಕ್ಕೆ ಮಿಗಿಲು. (3) ತಪ್ಪಿಲ್ಲ (4)

90. ನಿಸ್ವಾರ್ಥತೆಗಾಗಿ ಬದುಕಿದರೆ (1) ನಮ್ಮ ಬದುಕು (2) ಹಸನಾಗುತ್ತದೆ. (3) ತಪ್ಪಿಲ್ಲ (4)

91. ಯಾವುದೇ ರಾಜ್ಯಕ್ಕೆ (1) ಹಲವಾರು ಮಾತೃಭಾಷೆಯುಳ್ಳ (2) ಜನರಿರುತ್ತಾರೆ. (3) ತಪ್ಪಿಲ್ಲ (4)

92. ರಮೇಶನು ಸರ್ಕಾರಿ ಕೆಲಸಕ್ಕೆ (1) ಸೋಮವಾರ (2) ಪೂವಾಣ್ಣ ಸೇರಿಕೊಂಡನು. (3) ತಪ್ಪಿಲ್ಲ (4)

93. ಈ ಕೆಳಗಿನವರಲ್ಲಿ 'ಕನ್ನಡದ ಕಣ್ವ' ಎಂಬ ಬಿರುದಾಂಕಿತರು ಯಾರು ?

(1) ತೀ.ನಂ. ಶ್ರೀ

(2) ಬಿ.ಎಂ. ಶ್ರೀ

(3) ರಂ.ಶ್ರೀ. ಮುಗಳಿ

(4) ಮಧುರ ಚೆನ್ನ

94. ಶ್ರೀ ಪಾದರಾಜರ ಅಂಕಿತವೇನು ?

(1) ಗೋಪಾಲ ವಿಠಲ

(2) ಪುರಂದರ ವಿಠಲ

(3) ಕೃಷ್ಣ ವಿಠಲ

(4) ರಂಗ ವಿಠಲ

www.shikarat.com

95. ಪಟ್ಟಿ I ರಲ್ಲಿನ ಕವಿಗಳೊಂದಿಗೆ ಮತ್ತು ಪಟ್ಟಿ II ರಲ್ಲಿನ ದೊರೆಗಳನ್ನು ಹೊಂದಿಸಿರಿ.

| ಪಟ್ಟಿ I (ಕವಿಗಳು) | ಪಟ್ಟಿ II (ದೊರೆಗಳು) |
|---|---|
| A. ಪಂಪ | I. ತೈಲಪ |
| B. ಪೊನ್ನ | II. ಅರಿಕೇಸರಿ |
| C. ರನ್ನ | III. ಸತ್ಯಾಶ್ರಯ |
| D. ಚಾವುಂಡರಾಯ | IV. ರಾಚಮಲ್ಲ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | A | B | C | D |
|---|---|---|---|---|
| (1) | I | II | III | IV |
| (2) | II | I | III | IV |
| (3) | III | IV | I | II |
| (4) | III | IV | II | I |

96. ಈ ಕೆಳಗಿನವರಲ್ಲಿ ವಚನ ಪಿತಾಮಹರು ಯಾರು ?

(1) ಪಂಜೆ ಮಂಗೇಶರಾಯರು

(2) ಬೆಟಗೇರಿ ಕೃಷ್ಣಶರ್ಮರು

(3) ಪು.ತಿ. ನರಸಿಂಹಾಚಾರ್ಯರು

(4) ಫ.ಗು. ಹಳಕಟ್ಟಿಯವರು

***ಸೂಚನೆಗಳು** : ಈ ಕೆಳಗೆ (ಪ್ರಶ್ನೆ ಸಂಖ್ಯೆ **97 – 100**) P Q R S ಎಂಬ ನಾಲ್ಕು ವಾಕ್ಯಗಳನ್ನು ಕೊಡಲಾಗಿದೆ. ಈ ವಾಕ್ಯಗಳು ಸ್ಥಾನಪಲ್ಲಟವಾಗಿವೆ. ಅವುಗಳನ್ನು ಅರ್ಥಪೂರ್ಣವಾಗಿ ಜೋಡಿಸುವ ಉತ್ತರವನ್ನು ಗುರುತಿಸಬೇಕು.*

ಉದಾಹರಣೆ :

P. ಪುಲಿಗೆರೆ, ಕಿಸುವೊಳಲ್, ಕೊಪ್ಪಳ ಮತ್ತು ಒಕ್ಕುಂದ ಇವೇ ಆ ನಾಲ್ಕು ನಗರಗಳು.

Q. ಒಂಭತ್ತನೆಯ ಶತಮಾನದಲ್ಲಿ ಕನ್ನಡನಾಡು ಕಾವೇರಿಯಿಂದ ಗೋದಾವರಿಯವರೆಗೆ ಹಬ್ಬಿತ್ತು.

R. ಆ ನಾಡಿನಲ್ಲಿನ ನಾಲ್ಕು ನಗರಗಳ ಮಧ್ಯದ ಕನ್ನಡವೇ ಕನ್ನಡದ ತಿರುಳೆಂದು ಕವಿ ಹೇಳಿದ್ದಾನೆ.

S. ಆ ನಾಡಿನಲ್ಲಿ ವಾಸವಾಗಿದ್ದ ಜನತೆಯ ಉನ್ನತ ಸಂಸ್ಕೃತಿಯಿಂದಾಗಿ ಇಡೀ ವಿಶ್ವದಲ್ಲಿ ಕನ್ನಡ ನಾಡು ಒಂದು ವಿಶೇಷ ಸ್ಥಾನವನ್ನು ಪಡೆದಿತ್ತು.

(1) Q S R P

(2) S R Q P

(3) P Q R S

(4) R P Q S

ಇಲ್ಲಿ ಸರಿಯಾದ ಉತ್ತರ Q S R P ಆದುದರಿಂದ (1) ನ್ನು ಗುರುತಿಸಬೇಕು.

www.shikarat.com

97. P. ಪೃಥ್ವಿ, ಗಂಧವತೀ ಎನ್ನುವ ಮಾತನ್ನು ಕರ್ನಾಟಕ ಸತ್ಯಮಾಡಿ ತೋರಿಸಿದೆ.

Q. ಕನ್ನಡ ನುಡಿಯ ಕಂಪು, ಕನ್ನಡಿಗರ ಸಂಸ್ಕೃತಿಯ ಪೆಂಪು, ಭಾರತದಲ್ಲಿ ಬಹುದೂರದವರೆಗೆ ಹಬ್ಬಿಕೊಂಡಿದ್ದವು.

R. ಇಲ್ಲಿಯ ನೆಲ ಮಾತ್ರ ಸುಗಂಧ ಸೂಸಲಿಲ್ಲ ಇಲ್ಲಿಯ ಭಾಷೆ, ಸಂಸ್ಕೃತಿಗಳು ಕೂಡಾ ಸುಗಂಧ ಸೂಸಿವೆ.

S. ಕನ್ನಡ ನಾಡು ಪರಿಮಳಯುಕ್ತವಾದುದು. ಅದನ್ನು ಕಮ್ಮಿತ್ತು ನಾಡು, ಕಂಪು ಬೀರುವ ನಾಡು ಎಂದು ವರ್ಣಿಸಿಕೊಂಡು ಬರಲಾಗಿದೆ.

(1) S Q R P
(2) R S P Q
(3) P R Q S
(4) Q P S R

98. P. ಅನ್ನವನ್ನು ತಿನ್ನುವ ತಟ್ಟೆ ಸುಂದರವಾಗಿರಬೇಕು. ಕಟ್ಟಿದ ಮನೆ ಅಲಂಕೃತವಾಗಿರಬೇಕು.

Q. ಅಂದರೆ ಸೌಂದರ್ಯದ ಆಕಾಂಕ್ಷೆ ಆತನ ನಿತ್ಯ ಜೀವನದಲ್ಲಿ ಬೆಳೆಯಿತು.

R. ಇವುಗಳಿಂದ ತೃಪ್ತವಾಗದ ಇನ್ನೇನನ್ನೋ ಆತನ ಮನೋಮಯ, ಪ್ರಾಣಮಯ, ಆನಂದಮಯ ಆಕಾಂಕ್ಷೆಗಳು ಬಯಸಿದವು.

S. ಆಹಾರವನ್ನು ತಿಂದು, ಮನೆಯನ್ನು ಕಟ್ಟಿ ಬಾಳುವ ಅನ್ನಮಯ ವ್ಯಾಪಾರದಿಂದ ಮಾನವನಿಗೆ ಸಂಪೂರ್ಣ ತೃಪ್ತಿ ಲಭಿಸಲಿಲ್ಲ.

(1) Q P R S
(2) S R P Q
(3) P Q S R
(4) R S Q P

99. P. ಬೇಸಾಯಕ್ಕೆ ಜೊತೆಯಾಗಿ, ಆಸರೆಯಾಗಿ ರಾಟೆಯು ಬೇಸಾಯಕ್ಕೆ ಒಂದು ಗೌರವ ಕೊಟ್ಟಿತು.

Q. ರಾಟೆಯೇ ಜನರ ಸರ್ವಸ್ವ. ಅದು ಮಾಯವಾದಾಗಲೇ ಜನರ ಸ್ವಾತಂತ್ರ್ಯ ಮಾಯವಾಯಿತು.

R. ಏಳು ಸಾವಿರ ಹಳ್ಳಿಗಳು ಅದರಿಂದ ಸ್ವಸಂಪೂರ್ಣವಾಗಿದ್ದವು. ರಾಟೆ ಹೋದಾಗ ಅದರೊಡನೆ ಕೋಟಿ ವಿದ್ಯೆ ಹೋದವು.

S. ವಿಧವೆಯ ಗೆಳತಿ, ಹಸಿದವನಿಗೆ ಅನ್ನ ಸೋಮಾರಿತನಕ್ಕೆ ಮದ್ದು ರಾಟೆ. ಗ್ರಾಮ ಜೀವನದ ತಿರುಗಾಲಿ.

(1) Q P S R
(2) S R Q P
(3) R Q P S
(4) P S R Q

100. P. ಪ್ರಾಣವನ್ನು ಅಲಕ್ಷಿಸಿ ಅವರೆಲ್ಲರೂ ಹೋರಾಡಿದರು.

Q. ಮೌಲ್ಯಾರಾಧನೆ ಎಂಬುದು ನಗೆಪಾಟಲಾಯಿತು.

R. ಸ್ವಾತಂತ್ರ್ಯಪೂರ್ವದಿನಗಳಲ್ಲಿ ದೇಶಕ್ಕೆ ಸ್ವಾತಂತ್ರ್ಯ ತರುವುದೊಂದೇ ಎಲ್ಲರ ಗುರಿಯಾಗಿತ್ತು.

S. ಸ್ವಾತಂತ್ರ್ಯ ನಂತರದ ದಿನಗಳಲ್ಲಿ ಹಾಗೆ ಒಂದು ಗುರಿ ಇರಲಿಲ್ಲ.

(1) Q S P R
(2) S P Q R
(3) R P S Q
(4) P S Q R



www.shikarat.com